# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **329 (427)** |
| **ಸದಸ್ಯರ ಹೆಸರು** | : | **ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **10.03.2025** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ 'ಚಿಟ್ಟೆ ಪಾರ್ಕ್' ನಿರ್ಮಿಸಲು ಉದ್ದೇಶಿಸಲಾಗಿದೆಯೇ: ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಸಿದ್ದತೆಗಳೇನು: | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಚಿಟ್ಟೆ ಪಾರ್ಕ್ ಅನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.<br><br>ಬನ್ನೆರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಚಿಟ್ಟೆ ಪಾರ್ಕ್ ಅನ್ನು ನಿರ್ಮಿಸಿದ್ದು ಫೆಬ್ರುವರಿ ಮಾಹೆಯಲ್ಲಿ ವಲಯ ಅರಣ್ಯಾಧಿಕಾರಿಗಳು, ವನ್ಯಜೀವಿ ವಲಯ ಮೈಸೂರು ಹಾಗೂ ಸಿಬ್ಬಂದಿಗಳ ಜೊತೆ ಕ್ಷೇತ್ರ ತಪಾಸಣೆ ಮಾಡಿ ಅಲ್ಲಿನ ಚಿಟ್ಟೆ ಪಾರ್ಕಿನ ಮಾದರಿಗಳನ್ನು ಹೇಗೆ ಅಳವಡಿಕೊಳ್ಳಬೇಕು ಎಂಬ ಬಗ್ಗೆ ಮಾಹಿತಿ ಪಡೆದುಕೊಂಡು ಸಿದ್ದತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. |
| ಆ) | ಸದರಿ 'ಚಿಟ್ಟೆ ಪಾರ್ಕ್' ಅನ್ನು ಎಷ್ಟು ಎಕರೆ ಪ್ರದೇಶ ಹಾಗೂ ಎಷ್ಟು ಅಂದಾಜು ಮೊತ್ತದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ: (ವಿವರ ನೀಡುವುದು) | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಚಿಟ್ಟೆ ಪಾರ್ಕ್‌ನ್ನು –<br><br>Breeding Centre - 1500 Sq, ft, (ಚಿಟ್ಟೆಗಳ ಸಂತಾನೋತ್ಪತ್ತಿಗಾಗಿ) Exhibition Area – ಸುಮಾರು -5000 Sq, ft, ಪ್ರದೇಶದಲ್ಲಿ ಹಾಗೂ ಅಂದಾಜು ಮೊತ್ತ 30.00 ಲಕ್ಷಗಳಲ್ಲಿ ನಿರ್ಮಿಸಲು (2025-26ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು) ಉದ್ದೇಶಿಸಲಾಗಿದೆ. |
| ಇ) | ಈ ಸ್ಥಳದಲ್ಲಿ ಯಾವ ಯಾವ ಪ್ರಭೇದದ ಜಾತಿಯ ಆಕರ್ಷಕ, ಅಪರೂಪದ ಚಿಟ್ಟೆಗಳನ್ನು ಗುರುತಿಸಲಾಗಿದೆ ಅಥವಾ ನೋಡಲು ಸಿಗಲಿವೆ: (ಸಂಪೂರ್ಣ ವಿವರ ನೀಡುವುದು) | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ Lime Butterfly, Crimson Rose, Southern bird wing, Common rose, Blue tiger, Mottle emigrant, Yellow pansy, Red Pierrot, Poineer ಮತ್ತು Tailed jay ಜಾತಿಯ ಚಿಟ್ಟೆಗಳನ್ನು ಗುರುತಿಸಲಾಗಿರುತ್ತದೆ. |
| ಈ) | ಚಿಟ್ಟೆಗಳ ಆಹಾರಕ್ಕಾಗಿ ಯಾವ ಯಾವ ಪ್ರಮುಖ ಆಹಾರ ಸಸ್ಯಗಳನ್ನು/ ಗಿಡಗಳನ್ನು ಬೆಳೆಸಲಾಗಿದೆ ಅಥವಾ ಬೆಳೆಸಲು ಉದ್ದೇಶಿಸಲಾಗಿದೆ: (ವಿವರ ನೀಡುವುದು) | ಚಿಟ್ಟೆಗಳ ಆಹಾರಕ್ಕಾಗಿ ಈ ಕೆಳಕಂಡ ಸಸ್ಯಗಳು/ ಗಿಡಗಳನ್ನು ಬೆಳಸಲಾಗಿರುತ್ತದೆ. ಗಿಡಗಳು ಸಿಗದ ಸಮಯದಲ್ಲಿ ಕೃತಕವಾಗಿ ಹಣ್ಣು ಹಂಪಲುಗಳನ್ನು (ಬಾಳೆಹಣ್ಣು, ಕಿತ್ತಳೆ, ಕಪ್ಪು ದ್ರಾಕ್ಷಿ, ಅನಾನಸ್, ಹಲಸು) ನೀಡಲಾಗುತ್ತದೆ. |

| ಕ್ರಸಂ | ಚಿಟ್ಟೆಯ ಪ್ರಭೇದ | ಆಹಾರ ಸಸ್ಯಗಳು/ಗಿಡಗಳು |
|---|---|---|
| 1 | Lime Butterfly | Citrus Species ( ನಿಂಬೆ ಕಿತ್ತಳೆ ಇತ್ಯಾದಿ ) |
| 2 | Crimson Rose | Aristolochia Indica ( ಈಶ್ವರ ಬಳ್ಳಿ) |
| 3 | Southern bird wing | Aristolochia Indica ( ಈಶ್ವರ ಬಳ್ಳಿ) |
| 4 | Common rose | Aristolochia Indica ( ಈಶ್ವರ ಬಳ್ಳಿ) |

<table>
<tr><td></td><td></td><td>
<table>
<tr><td>5</td><td>Blue tiger</td><td>Wattkaka volubilis<br>(ಕಾಡು ಹಾಲೆ ಬಳ್ಳಿ)</td></tr>
<tr><td>6</td><td>Mottle emigrant</td><td>Cassia Spp<br>( ಕಕ್ಕೆ ಸೀಮೆ ತಂಗಡಿ)</td></tr>
<tr><td>7</td><td>Yellow pansy</td><td>Barleria prionotis<br>hygropila auriculata</td></tr>
<tr><td>8</td><td>Red Pierrot</td><td>Kalanchoea Pinnata<br>(ಕಾಡು ಬಸಳೆ)</td></tr>
<tr><td>9</td><td>Poineer</td><td>Capparis Sepiari<br>( ಕಾಡು ಕತ್ತರಿ, ಕಲ್ಲುರಕಿ )</td></tr>
<tr><td>10</td><td>Tailed jay</td><td>Michelia Champaca, Polyalthia spp<br>( ಅಶೋಕ ಮರ, ಸಂಪಿಗೆ )</td></tr>
</table>
</td></tr>
<tr><td>ಉ)</td><td>ರಾಜ್ಯದಲ್ಲಿ ಈಗಾಗಲೇ ಯಾವ ಯಾವ ಸ್ಥಳಗಳಲ್ಲಿ 'ಚಿಟ್ಟೆ ಪಾರ್ಕ್'ಗಳನ್ನು ನಿರ್ಮಿಸಲಾಗಿದೆ? (ಜಿಲ್ಲೆ, ಸ್ಥಳ, ನಿರ್ಮಾಣ ಮಾಡಲಾದ ವರ್ಷ, ವಿಸ್ತೀರ್ಣ, ನೋಡಲು ಸಿಗುವ ಚಿಟ್ಟೆ ಪ್ರಭೇದಗಳ ಸಂಖ್ಯೆ, ಆಕರ್ಷಕ/ಅಪರೂಪದ ಚಿಟ್ಟೆಗಳಿದ್ದಲ್ಲಿ ವಿವರ ನೀಡುವುದು).</td><td>ಬೆಂಗಳೂರು ನಗರ ಜಿಲ್ಲೆಯ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸುಮಾರು 4.86 ಹೆಕ್ಟೇರ್ ಪ್ರದೇಶದಲ್ಲಿ ಚಿಟ್ಟೆ ಉದ್ಯಾನವನವನ್ನು ನಿರ್ಮಾಣ ಮಾಡಿ 2007 ರಲ್ಲಿ ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಡಲಾಗಿರುತ್ತದೆ. ಚಿಟ್ಟೆ ಉದ್ಯಾನವನದ ಚಿಟ್ಟೆಗಳ ಆಹಾರಕ್ಕಾಗಿ ಸುಮಾರು 12 ಹೆಕ್ಟೇರ್ ಪ್ರದೇಶದಲ್ಲಿ ಹೋಸ್ಟ್ ಪ್ಲಾಂಟ್ ಗಾರ್ಡನ್ ನಿರ್ಮಾಣ ಮಾಡಲಾಗಿರುತ್ತದೆ. ಇಲ್ಲಿ ವಿವಿಧ ಋತುಗಳ ಕಂಡುಬರುವ ಸುಮಾರು 14 ಕ್ಕಿಂತಲೂ ಹೆಚ್ಚಿನ ಪ್ರಬೇಧದ ಚಿಟ್ಟೆಗಳನ್ನು ಅವುಗಳ ಸಂತಾನೋತ್ಪತ್ತಿ ಮಾಡಿ ಸಾರ್ವಜನಿಕರ ವೀಕ್ಷಣೆಗೆ ಬಿಡಲಾಗುತ್ತಿದೆ. (Lime butterfly, Blue Mormon, Common Mormon, Crimson rose, Southern bird wing, Three spot grass yellow, Pioneer, Common gull, Plain tiger, Blue tiger, Common crow, Common leopard, Common castor, Red Pierrot etc,).<br><br>ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ಚಿಟ್ಟೆ ಪಾರ್ಕ್ ಅನ್ನು 2023-24 ರಲ್ಲಿ ನಿರ್ಮಿಸಲಾಗಿದೆ. 2.00 ಹೆಕ್ಟೇರ್‌ನ ವಿಸ್ತೀರ್ಣ ಹೊಂದಿದ್ದು, ಕಾಣಸಿಗುವ 39 ಚಿಟ್ಟೆ ಪ್ರಭೇದಗಳ ವಿವರ ಅನುಬಂಧದಲ್ಲಿ ಲಗತ್ತಿಸಿದೆ.</td></tr>
</table>

**ಸಂಖ್ಯೆ: ಅಪಜೀ 38 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.